FEBRUARY 21, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ರಾಜ್ಯಾದ್ಯಂತ, ವಾಡಿಕೆಗಿಂತ 2 ದಶಾಂಶ 5 ಡಿಗ್ರಿ ಸೆಲ್ಶಿಯಸ್ ನಷ್ಟು, ಬಿಸಿಲು ಅಧಿಕ ಹಾಗೂ ಪ್ರಖರ.
- ರಾಷ್ಟ್ರೀಯ ಆರೋಗ್ಯ ಅಭಿಯಾನ; ಗುತ್ತಿಗೆ ನೌಕರರಿಗೆ, ರಾಜ್ಯದ 'ವಿಮಾ ಕವಚ ಯೋಜನೆ' ಅನ್ವಯ.
- ಖ್ಯಾತ ಗುಜರಾತಿ ಸಾಹಿತಿ, ಹಿಮಾನ್ಷಿ ಶೆಲತ್ ಅವರಿಗೆ, ಇಂದು ಬೆಂಗಳೂರಿನಲ್ಲಿ, 'ಕುವೆಂಪು ರಾಷ್ಟ್ರೀಯ ಪುರಸ್ಕಾರ' ಪ್ರದಾನ.
- ಇಂದು, ಅಂತಾರಾಷ್ಟ್ರೀಯ ಮಾತೃ ಭಾ ಾ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಮೈಕ್ರೋ ಫೈನಾನ್ಸ್ ಹಾಗೂ ಲೇವಾದೇವಿದಾರರಿಂದ, ಜನರಿಗೆ ಕಿರುಕುಳ ತಪ್ಪಿಸಲು, ಜಾರಿ ಮಾಡಲಾಗಿರುವ ಸುಗ್ರೀವಾಜ್ಞೆಗೆ ಪೂರಕವಾಗಿ, ಮುಂದಿನ ಬಜೆಟ್ ಅಧಿವೇಶನದಲ್ಲಿ, ಹೊಸ ವಿಧೇಯಕಗಳನ್ನು ಮಂಡಿಸಲು, ಸಚಿವ ಸಂಪುಟ ಸಭೆ ನಿರ್ಧರಿಸಿತು. ಈ ಸಂಬಂಧ ಮೂರು ಕಾನೂನು ತಿದ್ದುಪಡಿ ವಿಧೇಯಕಗಳನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ, ಸಚಿವ ಸಂಪುಟ ಸಭೆ ಅನುಮೋದಿಸಿತು. ಸುಗ್ರೀವಾಜ್ಞೆಗೆ ಅನುಮೋದನೆ ನೀಡುವ ಸಂದರ್ಭದಲ್ಲಿ, ರಾಜ್ಯಪಾಲರು ನೀಡಿದ್ದ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು, ವಿಧೇಯಕಗಳನ್ನು ರೂಪಿಸಲು, ಸಂಪುಟ ಸಭೆ ನಿರ್ಧರಿಸಿದೆ.

<><><>

ಪ್ರಸಕ್ತ ಫೆಬ್ರುವರಿ ತಿಂಗಳಲ್ಲಿ, ರಾಜ್ಯಾದ್ಯಂತ, ವಾಡಿಕೆಗಿಂತ 2 ದಶಾಂಶ 5 ಡಿಗ್ರಿ ಸೆಲ್ಶಿಯಸ್ ನಷ್ಟು ಬಿಸಿಲು ಅಧಿಕ ಹಾಗೂ ಪ್ರಖರವಾಗಿದೆ. ಜನ ಮುಂಜಾಗ್ರತೆ ವಹಿಸಬೇಕು. ಹಾಗೂ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ, ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ಸೂಚಿಸಿದ್ದಾರೆ. ಸಚಿವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನ ವಿಧಾನಸೌಧದಲ್ಲಿ, ಸಚಿವ ಸಂಪುಟ ಉಪ ಸಮಿತಿ ಸಭೆ, ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಕೃಷ್ಣ ಬೈರೇಗೌಡ, ಈ ಬಾರಿ ಮಾರ್ಚ್ ಕೊನೆಯ ವಾರದಲ್ಲಿ ಮಳೆಯಾಗುವ ನಿರೀಕ್ಷೆ ಇದೆ.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ವಾಡಿಕೆಗಿಂತ ಅಧಿಕ ಮಳೆಯಾಗುವ ನಿರೀಕ್ಷೆ ಇದೆ. ಅಕ್ಟೋಬರ್, ನವೆಂಬರ್, ಡಿಸೆಂಬರ್‌ನಲ್ಲಿ ಕಡಿಮೆ ಮಳೆಯಾಗಲಿದ್ದು, ಪೂರ್ವ ಮುಂಗಾರಿನಲ್ಲಿ ಅಧಿಕ ಮಳೆಯಾಗುವ ಸಾಧ್ಯತೆ ಇದೆ ಎಂದು ಹೇಳಿದರು.

<><><>

ಪ್ರಸಕ್ತ ಸಾಲಿನ ರಾಜ್ಯ ಆಯವ್ಯಯಕ್ಕೆ ಮುನ್ನೋಟವಾಗಿ, 'ಅಗ್ರಿ ಸ್ಟಾರ್ಟ್ ಅಪ್' ಉದ್ಯಮಿಗಳೊಂದಿಗೆ, ಕೃಷಿ ಖಾತೆ ಸಚಿವ ಎನ್.ಚಲುವರಾಯ ಸ್ವಾಮಿ, ಬೆಂಗಳೂರಿನಲ್ಲಿ ಚರ್ಚೆ ನಡೆಸಿದರು. ಕೃಷಿ ಕ್ಷೇತ್ರದಲ್ಲಿ ಹೊಸ ಆವಿಷ್ಕಾರಗಳು, ತಂತ್ರಜ್ಞಾನ ಬಳಕೆ ಮತ್ತು ನವೋದ್ಯಮ ನೀತಿಗಳನ್ನು ರೂಪಿಸಲು, ಈ ಸಭೆಯಲ್ಲಿ ಪ್ರಸ್ತಾವಗಳು ಮಂಡನೆಯಾದವು. ಅಗ್ರಿ ಸ್ಟಾರ್ಟ್ ಅಪ್ ಗಳಿಗೆ ಪ್ರೋತ್ಸಾಹ ಧನದ ಪ್ಯಾಕೇಜ್ ಮತ್ತು ಸಬ್ಸಿಡಿ, ಅವಕಾಶಗಳು, ಹಸಿರು ತಂತ್ರಜ್ಞಾನ, ರೈತರೊಂದಿಗೆ ನೇರ ಸಂಪರ್ಕ, ಮಾರುಕಟ್ಟೆ ಲಭ್ಯತೆ, ಉತ್ಪನ್ನಗಳ ಮೌಲ್ಯವರ್ಧನೆಗೆ ಪ್ರೋತ್ಸಾಹಿಸಲು, ಚಿಂತನ–ಮಂಥನ ನಡೆಯಿತು. ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಖಾತೆ ಸಚಿವ, ಪ್ರಿಯಾಂಕ್ ಖರ್ಗೆ ಪಾಲ್ಗೊಂಡಿದ್ದರು.

<><><>

ರಾಷ್ಟ್ರೀಯ ಆರೋಗ್ಯ ಅಭಿಯಾನ, ಎನ್.ಎಚ್.ಎಂ.ನಲ್ಲಿ, ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ, ನೌಕರರ ಹಿತದೃಷ್ಟಿಯಿಂದ, ರಾಜ್ಯ ಸರ್ಕಾರ 'ವಿಮಾ ಕವಚ ಯೋಜನೆ' ಜಾರಿಗೊಳಿಸಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. 'ವಿಮಾ ಕವಚ ಯೋಜನೆ ಅಡಿ'ಯಲ್ಲಿ, 60 ಲಕ್ಷ ರೂಪಾಯಿ ಮೊತ್ತದ ವಯಕ್ತಿಕ ಅಪಘಾತ ವಿಮೆ ಮತ್ತು 10 ಲಕ್ಷ ರೂಪಾಯಿಗಳ, ಅವಧಿ ವಿಮೆ ಪರಿಚಯಿಸಲಾಗಿದೆ. ರಾಜ್ಯದಲ್ಲಿ 25 ಸಾವಿರ ನೇರ ಗುತ್ತಿಗೆ ಉದ್ಯೋಗಿಗಳು ಪ್ರಯೋಜನ ಪಡೆಯಲಿದ್ದಾರೆ ಎಂದು ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಪ್ರಕಟಿಸಿದ್ದಾರೆ.

<><><>

ಕೇಂದ್ರದ ಪಂಚಾಯತ್ ರಾಜ್ ಸಚಿವಾಲಯದ, ಪಂಚಾಯತ್ ವಿಕೇಂದ್ರಿಕರಣ ಸೂಚ್ಯಂಕದಲ್ಲಿ, ಕರ್ನಾಟಕ ಅಗ್ರ ಸ್ಥಾನ ಪಡೆದಿದೆ. ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ಪ್ರಕಟಿಸಿರುವ, ಪಂಚಾಯತ್ ರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ, ಪಂಚಾಯತ್ ರಾಜ್ ವ್ಯವಸ್ಥೆ, ಪ್ರಜಾಪ್ರಭುತ್ವದ ಮುಕುಟ. ಅಧಿಕಾರದ ವಿಕೇಂದ್ರಿಕರಣದ ಮೂಲಕ, 'ಸ್ಥಳೀಯ ಸರ್ಕಾರ' ಎಂಬ ಪರಿಕಲ್ಪನೆಯ, ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಪಡಿಸಿ, ಅಭಿವೃದ್ಧಿ ಯೋಜನೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸಿದ, ಶ್ರದ್ಧೆಯ ಶ್ರಮದ ಫಲ ಎಂದಿದ್ದಾರೆ.

<><><>

ಕಲಬುರಗಿಯ ಷಡಕ್ಷರಿ ಸ್ವಾಮಿ ಡಿಗ್ಗಾಂವಕರ ಟ್ರಸ್ಟ್ ವಿಶ್ವಸ್ಥರಾದ, ನಾಡಿನ ಹಿರಿಯ ಪ್ರಕಾಶಕ, ಎಸ್.ಎಸ್.ಹಿರೇಮಠ ಜಾಲಿಹಾಳ ಅವರು, ಹಿರಿಯ ನಾಗರಿಕರಿಗಾಗಿ ವಾಟ್ಸ್ ಆಪ್ ಆಧಾರಿತ, 'ಸಾರ್ವಜನಿಕ ಸುಗಮ ಸೇವಾ ಯೋಜನೆ'ಗೆ ಪ್ರಸಕ್ತ ಬಜೆಟ್‌ನಲ್ಲಿ ಪ್ರಾವಧಾನ ಕಲ್ಪಿಸುವಂತೆ ಕೋರಿ, ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದ್ದಾರೆ. ರಾಜ್ಯದ ಹಿರಿಯ ನಾಗರಿಕರ ಸಮಸ್ಯೆ, ಕುಂದುಕೊರತೆ ಹಾಗೂ ಹಲವು ಯೋಜನೆಗಳಲ್ಲಿ ಫಲಾನುಭವಿಯಾಗಿಸಲು, ಇ–ಆಡಳಿತ ವ್ಯವಸ್ಥೆಯಲ್ಲಿ, ವಾಟ್ಸ್ ಆಪ್ ನಂಬರ್ ಒದಗಿಸುವಂತೆ ಕೋರಿದ್ದಾರೆ.

<><><>

ಎಸ್.ಎಸ್. ಹಿರೇಮಠ, ಜಾಲಿಹಾಳ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಖ್ಯಾತ ಗುಜರಾತಿ ಸಾಹಿತಿ, ಹಿಮಾನ್ಷಿ ಇಂದುಲಾಲ್ ಶೆಲತ್ ಅವರಿಗೆ, ಇಂದು ಬೆಳಗ್ಗೆ 11:30ಕ್ಕೆ, ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 2024ನೇ ಸಾಲಿನ, ಕುವೆಂಪು ರಾಷ್ಟ್ರೀಯ ಪುರಸ್ಕಾರ ನೀಡಿ ಗೌರವಿಸಲಿದ್ದಾರೆ. ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ, ಕುಪ್ಪಳಿಯ ರಾಷ್ಟಕವಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್.ಶಂಕರ ಮಾಹಿತಿ ನೀಡಿದರು. ಮಾಜಿ ಸಚಿವ ಎಂ.ಚಂದ್ರಶೇಖರ ಕುಟುಂಬ, ಕುವೆಂಪು ರಾಷ್ಟ್ರೀಯ ಪುರಸ್ಕಾರವನ್ನು ಸ್ಥಾಪಿಸಿದ್ದು, ಕಳೆದ 2013 ರಿಂದ ಭಾರತದ ಖ್ಯಾತ ಲೇಖಕ ಓರ್ವರನ್ನು ಆಯ್ಕೆ ಮಾಡಿ, 5 ಲಕ್ಷ ರೂಪಾಯಿ ಪ್ರಶಸ್ತಿ ನೀಡಿ, ಗೌರವಿಸಲಾಗುತ್ತಿದೆ ಎಂದರು.

<><><>

ಇಂದು, ಅಂತಾರಾಷ್ಟ್ರೀಯ ಮಾತೃ ಭಾ ೨ ದಿನಾಚರಣೆ. ಭಾಷೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಉತ್ತೇಜಿಸುವ ದಿನವಾಗಿದೆ. ಪ್ರಪಂಚದ ಹಲವು ಭಾ ಿಗಳ ಬಗ್ಗೆ ಅರಿವು ಮೂಡಿಸಲು, ಭಾ ಿಗಳನ್ನು ರಕ್ಷಿಸಲು, ಬಹು ಭಾ ೨ ವಾದವನ್ನು ಉತ್ತೇಜಿಸಲು, ಸಾಂಪ್ರದಾಯಿಕ ಜ್ಞಾನ ಮತ್ತು ಸಂಸ್ಕೃತಿ ವೈವಿಧ್ಯತೆ ಸಂರಕ್ಷಿಸಲು ಮತ್ತು ಅನ್ಯ ಭಾಷಿಕರ ಬಗ್ಗೆ, ಸಹಿ ೃತೆ ಮತ್ತು ಗೌರವವನ್ನು ಬೆಳೆಸಲು, ಮಾತೃ ಭಾಷಾ ದಿನ ಮೀಸಲಿದೆ.

<><><>

ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಮತ್ತು ಪು.ತಿ.ನರಸಿಂಹಾಚಾರ್ ಪ್ರತಿ ್ಠಾನದ ಕಾರ್ಯ ಚಟುವಟಿಕೆ ಹಾಗೂ ಅವುಗಳ ಬೇಡಿಕೆ ಕುರಿತು, ಮಹತ್ವದ ಸಭೆ ಬೆಂಗಳೂರಿನಲ್ಲಿ ನಡೆಯಿತು.

<><><>

ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ – ಕನ್ನಡ ಕಾವ್ಯ ಲೋಕದಲ್ಲಿ "ಕೆ.ಎಸ್. ನರಸಿಂಹಸ್ವಾಮಿ" ಯವರ ಸ್ಮರಣಾರ್ಥ, ಅವರ ಕೃತಿಗಳ ಸಂರಕ್ಷಣೆ, ಪ್ರಚಾರ ಮತ್ತು ಕನ್ನಡದ ಯುವ ಕವಿಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿದೆ.

<><><>

ಪು.ತಿ.ನ. ಪ್ರತಿ ್ಠಾನ – ಮೇಲುಕೋಟೆಯ ಕುಸುಮ ಹೃದಯ ಕವಿ ಪು.ತಿ.ನ. ಅವರ ಸ್ಮರಣಾರ್ಥ, ಅವರ ಕೃತಿಗಳ ಸಂಶೋಧನೆ, ಪ್ರಶಸ್ತಿ ಪ್ರದಾನ ಹಾಗೂ ಕನ್ನಡ ಭಾ ೆಯ ಬೆಳವಣಿಗೆಗೆ ಅನುದಾನ ನೀಡುತ್ತಿದೆ.

<><><>

ಸಭೆಯ ಬಳಿಕ, ಸಚಿವ ಚಲುವರಾಯಸ್ವಾಮಿ, ರಾಜ್ಯ ಸರ್ಕಾರ ಎಲ್ಲ ನೆರವು ನೀಡಲು, ಸಿದ್ಧವಿದೆ ಎಂದು, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲೂಕು, ಬಟ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಸಿದ್ದನಮಲೆ ಬೆಟ್ಟದ ಆಸುಪಾಸಿನಲ್ಲಿ, 40 ಅಪ್ರಕಟಿತ ಪ್ರಾಗೈತಿಹಾಸಿಕ ತಾಣಗಳನ್ನು, ಇತಿಹಾಸ ಸಂಶೋಧಕರ ತಂಡ ಪತ್ತೆ ಹಚ್ಚಿದೆ.

ಶಿವತಾರಕ್ ಅವರ ಮಾರ್ಗದರ್ಶನದಲ್ಲಿ, ಸಂಶೋಧಕ ಪವನ್ ಮೌರ್ಯ ಚಕ್ರವರ್ತಿ ನೇತೃತ್ವದ ತಂಡ, ಪುರಾತತ್ವ ಇಲಾಖೆಯ, ಕರ್ನಾಟಕ ರಾಜ್ಯ ಗ್ರಾಮವಾರು ಸಮೀಕ್ಷೆಯಲ್ಲಿ ಪತ್ತೆ ಮಾಡಿದೆ. ಪ್ರದೇಶ ಸಮಾಚಾರಕ್ಕಾಗಿ, ಪವನ್ ಮೌರ್ಯ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಪವನ್ ಮೌರ್ಯ ಧ್ವನಿ 40 ಸೆಕೆಂದುಗಳು

<><><>

ಬೆಂಗಳೂರಿನ ರಾಜಾಜಿ ನಗರದ, ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ, ಕನ್ನಡ ಪುಸ್ತಕ ಪ್ರಾಧಿಕಾರ, ಇಂದು ಬೆಳಗ್ಗೆ 11 ಗಂಟೆಗೆ, 'ಅಂಗಳದಲ್ಲಿ ತಿಂಗಳ ಪುಸ್ತಕ ಕಾರ್ಯಕ್ರಮ' ಆಯೋಜಿಸಿದೆ. ಪ್ರೊಫೆಸರ್ ಎಲ್.ಎಸ್.ಶೇಷಗಿರಿ ರಾವ್ ಅವರ ಜನ್ಮಶತಮಾನೋತ್ಸವದ ಹಿನ್ನೆಲೆ, ಎಲ್.ಎಸ್.ಎಸ್. ಅವರ ಸಮಗ್ರ ಸಾಹಿತ್ಯಾವಲೋಕನ ನಡೆಯಲಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಡಿದ್ದು ಭಾನುವಾರ ಬೆಳಗ್ಗೆ 11 ಗಂಟೆಗೆ, ಆಕಾಶವಾಣಿಯ ಜನಪ್ರಿಯ, 'ಮನ್ ಕಿ ಬಾತ್' ಕಾರ್ಯಕ್ರಮದ ಮೂಲಕ, ತಮ್ಮ ಚಿಂತನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನ್ ಕಿ ಬಾತ್ ನ 119ನೇ ಸಂಚಿಕೆಯಾಗಿದೆ. ಜನತೆ ತಮ್ಮ ಸಲಹೆಗಳು ಹಾಗೂ ಅಭಿಪ್ರಾಯಗಳನ್ನು, ನಮೋ ಆ್ಯಪ್ ಅಥವಾ My Gov.in ಜಾಲತಾಣ, ಟೋಲ್ ಫ್ರೀ ಸಂಖ್ಯೆ 1800–11–7800 ಗೆ ಕರೆ ಮಾಡಿ ಹಂಚಿಕೊಳ್ಳಲು, ಇಂದು ಮಧ್ಯ ರಾತ್ರಿ 11.45 ರ ವರೆಗೆ, ಅವಕಾಶವಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಸಂತ, ತ್ರಿಪದಿ ಕವಿ ಸರ್ವಜ್ಞ ಜಯಂತ್ಯುತ್ಸವವನ್ನು, ನಾಡಿನಾದ್ಯಂತ ಶ್ರದ್ಧಾ, ಭಕ್ತಿಯಿಂದ ಆಚರಿಸಿದ ವರದಿಗಳು ಬಂದಿವೆ.

<><><>

ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ ಹಿನ್ನೆಲೆ, ವಿಶೇಷ ಜನ ಜಾಗೃತಿ ಜಾಥಾ ಹಾಗೂ ಉಪನ್ಯಾಸ ಕಾರ್ಯಕ್ರಮಗಳು, ಹಲವು ಜಿಲ್ಲೆಗಳಲ್ಲಿ ಜರುಗಿದವು.

<><><>

ಹುಬ್ಬಳ್ಳಿಯಲ್ಲಿ ಆಯೋಜಿಸಿರುವ, ಎರಡು ದಿನಗಳ ಗಾಳಿಪಟ ಉತ್ಸವಕ್ಕೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಚಾಲನೆ ನೀಡಿದರು.

<><><>

ಮಾರ್ಚ್ 3 ರಿಂದ 21ರ ವರೆಗೆ, ರಾಜ್ಯ ವಿಧಾನ ಮಂಡಲದ ಬಜೆಟ್ ಅಧಿವೇಶನ ನಡೆಯಲಿದೆ ಎಂದು, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ದಾವಣಗೆರೆಯಲ್ಲಿ ಹೇಳಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಕಾರವಾರದ 'ಕೈಗಾ'ದಲ್ಲಿ, ಪ್ರಸ್ತುತ 4 ಅಣು ವಿದ್ಯುತ್ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, 5 ಮತ್ತು 6ನೇ ಘಟಕ ಕಾರ್ಯಾರಂಭಿಸಬೇಕಿದೆ ಎಂದು, ಕೈಗಾದ ವೈಜ್ಞಾನಿಕ ಅಧಿಕಾರಿ ಚಿತ್ತರಂಜನ್ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯಾದ್ಯಂತ, ವಾಡಿಕೆಗಿಂತ 2 ದಶಾಂಶ 5 ಡಿಗ್ರಿ ಸೆಲ್ಸಿಯಸ್ ನಷ್ಟು, ಬಿಸಿಲು ಅಧಿಕ ಹಾಗೂ ಪ್ರಖರ.
- ರಾಷ್ಟ್ರೀಯ ಆರೋಗ್ಯ ಅಭಿಯಾನ; ಗುತ್ತಿಗೆ ನೌಕರರಿಗೆ, ರಾಜ್ಯದ 'ವಿಮಾ ಕವಚ ಯೋಜನೆ' ಅನ್ವಯ.
- ಖ್ಯಾತ ಗುಜರಾತಿ ಸಾಹಿತಿ, ಹಿಮಾನ್ಷಿ ಶೆಲತ್ ಅವರಿಗೆ, ಇಂದು ಬೆಂಗಳೂರಿನಲ್ಲಿ, 'ಕುವೆಂಪು ರಾಷ್ಟ್ರೀಯ ಪುರಸ್ಕಾರ' ಪ್ರದಾನ.
- ಇಂದು, ಅಂತಾರಾಷ್ಟ್ರೀಯ ಮಾತೃ ಭಾ ಾ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>